(ಸಾಕ್ಷಿಯನ್ನು ದಿಃ 13.07.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಸ.ಸ.ಅ. ರವರಿಂದಃ-

6. ನಾನು ಪೊಲೀಸರಿಗೆ ಮದುವೆ ಲಗ್ನಪತ್ರಿಕೆಯನ್ನು, 7 ಬಿಲ್ಲುಗಳನ್ನು ಮತ್ತು ಭಾವಚಿತ್ರಗಳನ್ನು ಕೊಟ್ಟಿರುತ್ತೇನೆ. ಮದುವೆ ಲಗ್ನ ಪತ್ರಿಕೆ ಮತ್ತು ಬಿಲ್ಲುಗಳನ್ನು ನಿಪಿ-4 ರಿಂದ 11 ಎಂದು ಗುರುತಿಸಲಾಯಿತು. ಭಾವಚಿತ್ರಗಳೊಂದಿಗೆ ಸರಿಯಾದ ದೃಡಿಕರಣ ಪತ್ರ ಸಲ್ಲಿಸಿರುವುದಿಲ್ಲ ಹಾಗಾಗಿ ಅವುಗಳನ್ನು ನಿಶಾನಿಸಲು ಬರುವುದಿಲ್ಲ. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ. ಸದರಿ ಹೇಳಿಕೆಯನ್ನು ನಿಪಿ-12 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಿಂದಃ

7. ನನ್ನ ಮದುವೆ ಸಮಯದಲ್ಲಿ ವರದಕ್ಷಿಣೆಯಾಗಿ 6 ಲಕ್ಷ ಹಣ , 50 ಗ್ರಾಂ ಚಿನ್ನದ ಕೈ ಕಡ , 12 ಗ್ರಾಂ ಚಿನ್ನದ ಉಂಗುರ , ಒಂದು ಕೆಜಿ ಬೆಳ್ಳಿ ತಟ್ಟೆ, ಚಂಬನ್ನು ನನ್ನ ತಂದೆ ನನ್ನ ಗಂಡನಿಗೆ ಕೊಟ್ಟಿಲ್ಲ ಎಂದರೆ ಸರಿ. ನನಗೆ 32 ಗ್ರಾಂ ಚಿನ್ನದ ನಕ್ಲೆಸ್ , 30 ಗ್ರಾಂ ಚಿನ್ನದ ಕೈ ಬಳೆ , 10 ಗ್ರಾಂ ಚಿನ್ನದ ಓಲೆ ಜುಮುಕಿ ಕೊಟ್ಟಿಲ್ಲ ಎಂದರೆ ಸರಿ. 30 ಲಕ್ಷ ಖರ್ಚು ಮಾಡಿಲ್ಲ. ವೀರಶೈವ ಕಲ್ಯಾಣ ಮಂಟಪದಲ್ಲಿ ನನ್ನ ತಂದೆ ಮದುವೆ ಮಾಡಿಕೊಟ್ಟಿಲ್ಲ ಎಂದರೆ ಸರಿ. ಮದುವೆಯಾದ ನಂತರ ಎಸ್ ಎಸ್ ಐ ಟಿ ಕಾಲೇಜಿನ ಬಳಿ ಇರುವ ಶಾನುಬೋಗರ ಕಾಂಪೌಡ್ ನಲ್ಲಿ ಇರುವ ರಜತಾದ್ರಿ ನಿಲಯಕ್ಕೆ ನನನ್ನು ಕರೆದುಕೊಂಡು ಹೋಗಿ ಚೆನ್ನಾಗಿ ನೋಡಿಕೊಂಡಿದ್ದಾರೆ ಎಂದರೆ ಸರಿ. ನನ್ನ ಗಂಡ ಸೈಟನ್ನು ಖರೀದಿ ಮಾಡಿ ಪಿ ಜಿ ಕಟ್ಟಡ ಕಟ್ಟಬೇಕು ಅದಕ್ಕೆ ಹಣದ ಸಮಸ್ಯೆ ಇದೆ , ನಿನ್ನ ತಂದೆಯ ಹತ್ತಿರ ವರದಕ್ಷಿಣೆಯಾಗಿ 5 ಲಕ್ಷ ಹಣ ಬೇಕು ಕೇಳು ಎಂದು ಹೇಳಿಲ್ಲ ಎಂದರೆ ಸರಿ.

8. ತುಂಬಾ ಹಿಂಸೆ ಕೊಟ್ಟಿಲ್ಲ ಎಂದರೆ ಸರಿ. ಕೆಟ್ಟ ಮಾತಿನಲ್ಲಿ ಬೈದಿಲ್ಲ ಎಂದರೆ ಸರಿ. ಅದನ್ನು ನನ್ನ ತಂದೆಗೆ ಹೇಳಿಲ್ಲ ಎಂದರೆ ಸರಿ. ಅವರು 5 ಲಕ್ಷ ಹಣ ನನ್ನ ಗಂಡನಿಗೆ ಕೊಟಿಲ್ಲಎಂದರೆ ಸರಿ. 2 ತಿಂಗಳು ಬಿಟ್ಟು ಮತ್ತೆ 6 ಲಕ್ಷ ಹಣ ಬೇಕು ಎಂದು ನನನ್ನು ನನ್ನ ಗಂಡ ನನ್ನ ತವರು ಮನೆಗೆ ಕಳುಹಿಸಿಲ್ಲ ಎಂದರೆ ಸರಿ. ನಂತರ ನನ್ನ ತಂದೆ 6 ಲಕ್ಷ ಹಣ ತಂದು ನನ್ನ ಗಂಡನಿಗೆ ಕೊಟ್ಟಿಲ್ಲ ಎಂದರೆ ಸರಿ. ನನನ್ನು ಗಂಡನ ಮನೆಯಲ್ಲಿ ಬಿಟ್ಟು ಹೋಗಿಲ್ಲ ಎಂದರೆ ಸರಿ. ನಾನು ಗರ್ಬಿಣಿಯಾದಾಗ ಆಸ್ಪತ್ರೆಗೆ ತೋರಿಸಬೇಕು ಎಂದು ಹೇಳಿದಾಗ ನನ್ನ ಅತ್ತೆ 50 ಲಕ್ಷ ಹಣವನ್ನು ತವರು ಮನೆಯಿಂದ ತೆಗೆದುಕೊಂಡು ಬಾ ಹೇಳಿಲ್ಲ ಎಂದರೆ ಸರಿ. ಇಲ್ಲದಿದ್ದರೆ ಗರ್ಭಪಾತ ಮಾಡಿಸಿಕೊ ನಿನಗೆ ಏಕೆ ಬೇಕು ಮಕ್ಕಳು ದರಿದ್ರ ಮುಂಡೆ ಎಂದು ಕೆಟ್ಟ ಮಾತುಗಳಲ್ಲಿ ಬೈದಿಲ್ಲ ಎಂದರೆ ಸರಿ. ನನ್ನ ಗಂಡ ನನ್ನ ಕಪಾಳಕ್ಕೆ ಹೊಡೆದಿಲ್ಲ , ಹೆಚ್ಚಿನ ವರದಕ್ಷಿಣೆ ತೆಗೆದುಕೊಂಡು ಬಾ ಎಂದು ಬೈದಿಲ್ಲ ಮತ್ತು ಪ್ರಾಣ ಬೆದರಿಕೆ ಹಾಕಿಲ್ಲ ಎಂದರೆ ಸರಿ.

9. ನಾನು ಬಾಣಂತಿತನಕ್ಕೆಂದು ತವರು ಮನೆಗೆ ಹೋದಾಗ ನನಗೆ ಹೆಣ್ಣು ಮಗು ಆಗಿದ್ದು ಆಗ ನನ್ನ ಗಂಡ ಗಂಡು ಮಗು ಬೇಕಾಗಿತ್ತು , ನೀನು ಹೆಣ್ಣು ಮಗುವನ್ನು ಎತ್ತಿದ್ದಿಯ ಎಂದು ನನಗೆ ತೊಂದರೆ ಕೊಟ್ಟಿಲ್ಲ ಎಂದರೆ ಸರಿ. ಹಣಕ್ಕೆ ಹಿಂಸೆ ನೀಡಿಲ್ಲ ಎಂದರೆ ಸರಿ. ನನ್ನ ತಂದೆ ಮತ್ತು ಹಿರಿಯರು ಸೇರಿ ತುಂಬಾ ಬಾರಿ ನ್ಯಾಯ ಪಂಚಾಯ್ತಿ ಮಾಡಿಲ್ಲ ಎಂದರೆ ಸರಿ. ದಿನಾಂಕ 15.01.2024 ರಲ್ಲಿ ಸಂಕ್ರಾಂತಿ ಹಬ್ಬದ ದಿನ ನನನ್ನು ಮತ್ತು ನನ್ನ ಮಗಳನ್ನು ನನ್ನ ತಂದೆ ತಾಯಿ ಮತ್ತು ನನ್ನ ತಾಯಿಯ ಅತ್ತಿಗೆ ಆಶಾ ಕರೆದುಕೊಂಡು ನನ್ನ ಗಂಡನ ಮನೆಯಲ್ಲಿ ಬಿಡಲು ಬಂದಿರಲಿಲ್ಲ ಎಂದರೆ ಸರಿ. ಆಗ ಅವರು ನಮ್ಮನ್ನು ಒಳಗೆ ಬಿಡದೆ ನಾವು 20 ಲಕ್ಷ ಹಣಬೇಕೆಂದು ಕೇಳಿಲ್ಲ ಎಂದರೆ ಸರಿ. ಅದನ್ನು ಕೊಟ್ಟು ನಿನ್ನ ಮಗಳು ಮತ್ತು ಮಗುವನ್ನು ಬಿಟ್ಟು ಹೋಗಿ ಇಲ್ಲದಿದ್ದರೆ ಯಾವ ಮೊಮಗಳು ಬೇಡ ಎಂದು ನನನ್ನು ಅವಾಚ್ಯ ಶಬ್ದಗಳಿಂದ ಬೈದಿಲ್ಲ ಎಂದರೆ ಸರಿ.

10. ನನ್ನ ಗಂಡ ನನ್ನ ಕಪಾಳಕ್ಕೆ ಹೊಡೆದಿಲ್ಲ ಎಂದರೆ ಸರಿ. ಆ ರೀತಿ ನೀಡುತ್ತಿದ್ದ ಹಿಂಸೆಯನ್ನು ನೋಡಲು ಆಗದೆ ನನ್ನ ತಂದೆ ನನನ್ನು ಕರೆದುಕೊಂಡು ಹೋಗಿಲ್ಲ ಎಂದರೆ ಸರಿ. ದಿನಾಂಕ 04.05.2024 ರಂದು ಏಕಾಏಕಿ ನನ್ನ ಗಂಡ ನನ್ನ ತಂದೆಯ ಮನೆಗೆ ಬಂದು ನನ್ನ



ಮೇಲೆ ಹಲ್ಲೆ ಮಾಡಿಲ್ಲ, 50 ಲಕ್ಷ ಹಣ ಕೇಳಿಲ್ಲ , ಅದನ್ನು ಕೊಡಿಸು ಎಂದು ಎಂದರೆ ಸರಿ. ನಾನು ನನ್ನ ತಂದೆಯ ಬಳಿ ಅಷ್ಟು ಹಣ ಇಲ್ಲವೆಂದು ಹೇಳಿಲ್ಲ ಎಂದರೆ ಸರಿ. ನೀರಿನ ಸ್ಟೀಲ್ ಬಾಟಲ್ ನಿಂದ ನನ್ನ ಬಲ ಹಣೆಗೆ ಹೊಡೆದಿಲ್ಲ ಎಂದರೆ ಸರಿ. ಕುತ್ತಿಗೆ ಮೇಲೆ , ಎದೆಯ ಮೇಲೆ ಕಾಲು ಇಟ್ಟಿಲ್ಲ ಎಂದರೆ ಸರಿ. ಸಾಯಿ ಸೂಳೆ ಮುಂಡೆ ನಿನನ್ನು ಬಿಡುವುದಿಲ್ಲವೆಂದು ದೈಹಿಕವಾಗಿ ಹಿಂಸೆ ಕೊಟ್ಟಿಲ್ಲ ಎಂದರೆ ಸರಿ. ಬಲಗೈನ ಮಧ್ಯದ ಬೆರಳನ್ನು ಹಲ್ಲಿನಿಂದ ಕಚ್ಚಿರುವುದಿಲ್ಲ ಎಂದರೆ ಸರಿ. ಗಲಾಟೆಯನ್ನು ಬಿಡಿಸಲು ನನ್ನ ತಾಯಿ ಬಂದಿಲ್ಲ ಎಂದರೆ ಸರಿ. ಅವರಿಗೂ ತಲೆಗೆ ಹೊಡೆದು ಹಿಂದಕ್ಕೆ ತಳ್ಳಿಲ್ಲ ಎಂದರೆ ಸರಿ. ನನಗೆ ಚೇರನ್ನು ಎಸೆದಿಲ್ಲ ಎಂದರೆ ಸರಿ. ಚೇರ್ ಎಸೆದ ಶಬ್ದ ಕೇಳಿಸುತ್ತಿರಲಿಲ್ಲ , ನಾನು ಕೂಗಾಡುತ್ತಿರಲಿಲ್ಲ ಎಂದರೆ ಸರಿ. ಅದನ್ನು ಕೇಳಿ ನನ್ನ ಅಣ್ಣ ಮನೆಯ ಒಳಗೆ ಬಂದಿಲ್ಲ ಎಂದರೆ ಸರಿ.

11. ನನ್ನ ಅಣ್ಣನ ಬಲಗೈ ಬೆರಳನ್ನು ರಕ್ತ ಬರುವ ಹಾಗೆ ಕಚ್ಚಿಲ್ಲ , ಮೈಕೈಗೆ ಹೊಡೆದಿಲ್ಲ ಎಂದರೆ ಸರಿ. ಈ ಗಲಾಟೆಯನ್ನು ಕೇಳಿಸಿಕೊಂಡು ಅಕ್ಕ ಪಕ್ಕದ ಮನೆಯವರು ಬಂದು ಬಿಡಿಸಿಲ್ಲ ಎಂದರೆ ಸರಿ. ನನಗೆ ಗಾಯವಾಗಿದ್ದನ್ನು ನೋಡಿ ಆಸ್ಪತ್ರೆಗೆ ಕಳುಹಿಸಿಲ್ಲ ಎಂದರೆ ಸರಿ. ತುಮಕೂರು ಸರ್ಕಾರಿ ಆಸ್ಪತ್ರೆಯಲ್ಲಿ ನಾನು ಚಿಕಿತ್ಸೆ ಪಡೆದುಕೊಂಡಿಲ್ಲ ಎಂದರೆ ಸರಿ. ದಿನಾಂಕ 05.07.2024 ರಂದು ನಾನು ಪೊಲೀಸ್ ಠಾಣೆಯಲ್ಲಿ ದೂರು ನೀಡಿಲ್ಲ ಎಂದರೆ ಸರಿ. ದಿನಾಂಕ 09.05.2024 ಕ್ಕೆ ಹೆಗ್ಗೆರೆಯ ತವರು ಮನೆಯಲ್ಲಿ ಪೊಲೀಸರು ಸಂಜೆ 4 ರಿಂದ 5 ಗಂಟೆ ಸಮ ಯದಲ್ಲಿ ಮಹಜರ್ ಮಾಡಿಲ್ಲ ಎಂದರೆ ಸರಿ. ಅಮಾನತ್ತು ಮಹಜರ್ ಮಾಡಿಲ್ಲ ಎಂದರೆ ಸರಿ. ಆಗ ಮುಮಾ-1 ಮತ್ತು 2 ಸ್ಟೀಲ್ ಬಾಟೆಲ್ ಮತ್ತು ಚೇರನ್ನು ವಶಪಡಿಸಿಕೊಂಡಿಲ್ಲ ಎಂದರೆ ಸರಿ. ಪೊಲೀಸರಿಗೆ ನಾನು ಯಾವುದೆ ಮದುವೆ ಆಮಂತ್ರಣ ಪತ್ರ , ಭಾವಚಿತ್ರಗಳು ಮತ್ತು ರಸೀದಿಗಳನ್ನು ಕೊಟ್ಟಿಲ್ಲ ಎಂದರೆ ಸರಿ.

<u>ಮರು ವಿಚಾರಣೆಃ</u> ಈಗ ನಾನು ಮತ್ತು ಆರೋಪಿಗಳು ರಾಜಿಯಾಗಿದ್ದೇವೆ ಎಂದರೆ ಸರಿ. ಆ ಕಾರಣದಿಂದ ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಸಾಕ್ಷ್ಯಕ್ಕೆ ವಿರುದ್ದವಾಗಿ ಆರೋಪಿಗಳ ಪಾಟಿ ಸವಾಲಿನಲ್ಲಿ ಸಾಕ್ಷ್ಯನುಡಿದಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ. ಸರಿ ಇದೆ

**2 ನೇ ಅಧಿಕ ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ. ತುಮಕೂರು**